# ಹಾಳಾಗುತ್ತಿರುವ ಕನ್ನಡ ಸಂಸ್ಕೃತಿ ಸರಿಪಡಿಸಬೇಕಿದೆ: ಕೆ.ಜಿ.ಎನ್


## ‘ಆನು ಒಲಿದಂತೆ ಹಾಡುವೆ’ ಸರಣಿ ಕಾರ್ಯಕ್ರಮದಲ್ಲಿ ಹಿರಿಯ ವಿದ್ವಾಂಸ ನಾಡೋಜ ಪ್ರೊ.ನಾಗರಾಜಪ್ಪ ಹೇಳಿಕೆ

■ **ಉದಯವಾಣಿ ಸಮಾಚಾರ**

**ಬೆಂಗಳೂರು:** ಕನ್ನಡ ಸಂಸ್ಕೃತಿ ಹಾಳಾಗುತ್ತಿದೆ. ಅದನ್ನು ಸರಿಪಡಿಸುವ ದಾರಿಗಳು ಯಾವುವು ಎನ್ನುವುದು ಸಮಕಾಲೀನ ಪ್ರಶ್ನೆಯಾಗಿದೆ. ಇದನ್ನು ಬಹುಸಂಸ್ಕೃತಿಯ ನೆಲೆಯಲ್ಲಿ ಚರ್ಚಿಸುವುದು, ವಿಶ್ಲೇಷಿಸುವುದು ನಿಜವಾದ ಸಾಹಿತ್ಯವಾಗಿದೆ ಎಂದು ಹಿರಿಯ ವಿದ್ವಾಂಸ ನಾಡೋಜ ಪ್ರೊ. ಕೆ.ಜಿ.ನಾಗರಾಜಪ್ಪ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಅಭಿನವ ಮತ್ತು ಸೈಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯದ ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ‘ಆನು ಒಲಿದಂತೆ ಹಾಡುವೆ’ ಸರಣಿಯ ಕನ್ನಡ ಮನಸ್ಸಿನೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಮಾತನಾಡಿದರು.

ತಮಿಳುನಾಡು, ಕೇರಳ, ಮಹಾರಾಷ್ಟ್ರಗಳಿಂದ ಕನ್ನಡಿಗರು ಕನ್ನಡ ಭಾಷೆ ಸಾಹಿತ್ಯವನ್ನು ಹೇಗೆ ಸಂರಕ್ಷಿಸಬೇಕೆಂಬುದನ್ನು ಕಲಿಯಬೇಕಿದೆ. ಸಾಹಿತ್ಯ ಶ್ರೀಸಾಮಾನ್ಯನದು. ಆದರೆ, ಮುಖ್ಯವಾಹಿನಿಯ ಸಾಹಿತ್ಯ ಚರಿತ್ರೆಯಲ್ಲಿ ಅವನಿಗೆ ಸ್ಥಾನವಿಲ್ಲ. ಮಹಿಳೆಗೆ ಪ್ರಾತಿನಿಧ್ಯ ಇಲ್ಲ. ಮೂಕ ಸಮುದಾಯಗಳಿಲ್ಲ. ಶೋಷಿತ ಧ್ವನಿಗಳಿಲ್ಲ. ಅವನ್ನು ಮುಖ್ಯವಾಹಿನಿ ಸಾಹಿತ್ಯದೊಳಗೆ ತರುವ ಅಗತ್ಯವಿದೆ ಎಂದು ತಿಳಿಸಿದರು.



‘ಆನು ಒಲಿದಂತೆ ಹಾಡುವೆ’ ಸರಣಿಯ ಒಂದು ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು.

ಕನ್ನಡ ವಿಶ್ವವಿದ್ಯಾಲಯ ಹಂಪಿಯ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಮಾತನಾಡಿ, ಕೆ.ಜಿ.ಎನ್.ರಂತಹ ವಿದ್ವಾಂಸರು ಹೊಸ ತಲೆಮಾರಿಗೆ ಒಂದು ಮಾದರಿ. ಅವರ ಸಂಸ್ಕೃತಿ ಚಿಂತನೆ ಮರುಚಿಂತನೆಯ ರೂಪದಲ್ಲಿ ವ್ಯಕ್ತಗೊಂಡಿದೆ ಎಂದರು.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಡಾ.ವೆಂಕಟಗಿರಿ ದಳವಾಯಿ ಮಾತನಾಡಿ, ಕೆ.ಜಿ.ಎನ್.ಗುಪ್ತ ಸಮಾಜ, ಗುಪ್ತಭಕ್ತಿಯ ಧಾರೆಗಳನ್ನು ಕನ್ನಡಕ್ಕೆ ಪರಿಚಯಿಸಿದವರು. ನಿಜವಾದ ಸಾಹಿತ್ಯ ಇರುವುದು ತಂತ್ರ ಮತ್ತು ಯೋಗದಲ್ಲಿ. ಕನ್ನಡ ಸಾಹಿತ್ಯ ಅವುಗಳನ್ನು ಇದುವರೆಗೂ ಅಧ್ಯಯನ ಮಾಡಿಲ್ಲ. ಮಾಡುವ ಮಾದರಿಗಳನ್ನು ಕೆ.ಜಿ.ಎನ್. ನಮಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಅಲಕ್ಷ್ಯಕ್ಕೆ ಒಳಗಾದ ಸಂಶೋಧನೆ ಹೊಸ ತಲೆಮಾರಿಗೆ ಪರಿಚಯಿಸಬೇಕು:

ಈ ಮಾಲಿಕೆಯ ಉದ್ದೇಶ ಅಲಕ್ಷ್ಯಕ್ಕೆ ಒಳಗಾದ ಸಂಶೋಧನೆ ಮತ್ತು ವಿಮರ್ಶೆಯನ್ನು ಮುನ್ನೆಲೆಗೆ ತರುವುದು, ಹಿರಿಯರ ಅನುಭವವನ್ನು ಹೊಸ ತಲೆಮಾರಿಗೆ ಪರಿಚಯಿಸುವುದಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕೇವಲ ಹಂಪಿಗೆ ಸೀಮಿತವಾಗದೆ ಕರ್ನಾಟಕವನ್ನು ತನ್ನ ಭೂಮಿಕೆಯನ್ನಾಗಿಸಿಕೊಂಡಿರುವುದು ಮತ್ತು ಅರಿವನ್ನು ವಿಸ್ತರಿಸುವ ವಿಶ್ವವಿದ್ಯಾಲಯವಾಗಿದೆ ಎಂದು ಅಭಿನವ ಬೆಂಗಳೂರಿನ ನ.ರವಿಕುಮಾರ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಸೈಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರದ ಸಂಚಾಲಕ ಡಾ. ಕುಮಾರಸ್ವಾಮಿ ಬೆಜ್ಜೆಹಳ್ಳಿ, ಸಂಸ್ಕೃತಿ ಚಿಂತಕರಾದ ಮಹೇಶ್ ಹರಿವೆ, ಡಾ.ರುಕ್ಮಿಣಮ್ಮ, ಹಿರಿಯ ಪತ್ರಕರ್ತೆ ಆರ್.ಪೂರ್ಣಿಮಾ, ಇತಿಹಾಸ ಅಕಾಡೆಮಿ ಕಾರ್ಯದರ್ಶಿ ಕೆ ಎಲ್ ರಾಜಶೇಖರ, ಲೇಖಕಿ ಪಿ.ಚಂದ್ರಿಕಾ ಮತ್ತಿತರರು ಉಪಸ್ಥಿತರಿದ್ದರು.

> **ಕನ್ನಡ ಸಂಸ್ಕೃತಿಯನ್ನು ಬೆಳೆಸುವಲ್ಲಿ ನಮ್ಮ ವಿಶ್ವವಿದ್ಯಾನಿಲಯವು ಅನೇಕ ಕನಸುಗಳನ್ನು ಕಂಡಿದೆ. ಕನ್ನಡ ಸಾಹಿತ್ಯವನ್ನು ಬೆಳೆಸುವಲ್ಲಿ ನಮ್ಮ ವಿಭಾಗವು ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಅದಕ್ಕಾಗಿ ನಾವು ಕನ್ನಡ ಭಾಷೆ ಮತ್ತು ಸಂಸ್ಕೃತಿ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದೇವೆ.**
>
> • **ರೆವರೆಂಡ್ ಡಾ.ವಿಕ್ಟರ್ ಲೋಬೋ, ಕುಲಪತಿ, ಸೈಂಟ್ ಜೋಸೆಫ್ಸ್ ವಿಶ್ವವಿದ್ಯಾನಿಲಯ**